# ಗಾಂಧಿನಗರ ಪೋಸ್ಟ್



## ಪವನ್‌ಗೆ ಎಟುಕಿದ ಕನ್ನಡದ ಮಲ್ಲಿಗೆ

‘ಒಂದು ಮೊಟ್ಟೆಯ ಕಥೆ’ ಕನ್ನಡ ಚಿತ್ರರಂಗಕ್ಕೆ ಹಿತಕರವಾಗಿ ಪರಿಣಮಿಸಿದೆ. ಹೊಸ ಪ್ರತಿಭೆಗಳು ಒಳ್ಳೆಯ ಚಿತ್ರವೊಂದನ್ನು ಮಾಡಿ ಪ್ರೇಕ್ಷಕರ ಗಮನಸೆಳೆಯಬಹುದು ಎನ್ನುವ ನಂಬಿಕೆಗೆ ‘ಮೊಟ್ಟೆಯ ಕಥೆ’ ಧೈರ್ಯ ತುಂಬುವಂತಿದೆ. ಈ ಯಶಸ್ಸು ಯುವ ನಿರ್ದೇಶಕ ಹಾಗೂ ಚಿತ್ರದ ನಾಯಕ ನಟರಾಜ್ ಬಿ. ಶೆಟ್ಟಿ ಅವರಿಗೆ ಸಲ್ಲಬೇಕು. ಜೊತೆಗೇ ನೆನಪಿಸಿಕೊಳ್ಳಬೇಕಾದ ಹೆಸರು ಪವನ್ ಕುಮಾರ್ ಅವರದು.

ಪವನ್ ಹೊಸ ಚಿಂತನೆಗಳಿಗೆ ಹೆಸರಾದವರು. ಅವರ ನಿರ್ದೇಶನದ ‘ಲೈಫು ಇಷ್ಟೇನೆ’, ‘ಲೂಸಿಯಾ’ ಹಾಗೂ ‘ಯು ಟರ್ನ್’ ಸಿನಿಮಾಗಳು ಬೇರೆ ಬೇರೆ ಕಾರಣಗಳಿಗಾಗಿ ಚಿತ್ರರಂಗದ ಗಮನಸೆಳೆದಿವೆ. ‘ಯು ಟರ್ನ್’ ಚಿತ್ರವಂತೂ ಹಲವು ಪ್ರಶಸ್ತಿಗಳನ್ನು ಪಡೆಯುವುದರ ಜೊತೆಗೆ, ಅಂತರರಾಷ್ಟ್ರೀಯ ವೇದಿಕೆಗಳಲ್ಲೂ ಪ್ರದರ್ಶನ ಕಂಡಿದೆ. ಇಂಥ ಕ್ರಿಯಾಶೀಲ ನಿರ್ದೇಶಕ ಮೊಟ್ಟೆಯ ತಂಡಕ್ಕೆ ಬೆನ್ನೆಲುಬಾಗಿ ನಿಂತಿರುವುದು, ನಿರ್ಮಾಣದ ಜವಾಬ್ದಾರಿ ವಹಿಸಿಕೊಂಡಿರುವುದು ಚಿತ್ರದ ಗೆಲುವಿಗೆ ಪೂರಕವಾಗಿದೆ.

ಪವನ್ ಚಿತ್ರಗಳು ಒಂದುರೀತಿಯಲ್ಲಿ ಕಂಗ್ಲಿಷ್ ಚಿತ್ರಗಳು. ಮಲ್ಟಿಪ್ಲೆಕ್ಸ್ ಪ್ರೇಕ್ಷಕರನ್ನೇ ಹೆಚ್ಚು ನೆಚ್ಚಿಕೊಂಡ ನಿರ್ದೇಶಕರವರು. ಪರಭಾಷಾ ಪ್ರೇಕ್ಷಕರನ್ನೂ ಗಮನದಲ್ಲಿಟ್ಟುಕೊಂಡು ಅವರು ತಮ್ಮ ಚಿತ್ರಗಳನ್ನು ರೂಪಿಸುತ್ತಾರೆ. ‘ಡಬ್ಬಿಂಗ್ ಪರವಾಗಿ ವಾದ ಮಂಡಿಸುವ ಪವನ್ ಅವರ ಚಿತ್ರಗಳನ್ನೇ ಮೊದಲು ಕನ್ನಡಕ್ಕೆ ಡಬ್ ಮಾಡಬೇಕು’ ಎಂದು ಪ್ರೀತಿಯಿಂದಲೇ ಅವರನ್ನು ಟೀಕಿಸಬಹುದಾಗಿದೆ. ಇಂಥ ಪವನ್ ‘ಒಂದು ಮೊಟ್ಟೆಯ ಕಥೆ’ಯಂಥ ಅಪ್ಪಟ ಕನ್ನಡ ಚಿತ್ರದೊಂದಿಗೆ ಗುರ್ತಿಸಿಕೊಂಡಿರುವುದು ವಿಶೇಷ. ಈ ಸಿನಿಮಾ ಪ್ರೇಕ್ಷಕರಿಗೆ ಇಷ್ಟವಾಗಿರುವುದಕ್ಕೆ ಅದರಲ್ಲಿ ಬಳಕೆಯಾಗಿರುವ ಮಂಗಳೂರು ಕನ್ನಡದ ಘಮವೂ ಒಂದು ಕಾರಣ. ತಮ್ಮ ನಿರ್ದೇಶನದ ಸಿನಿಮಾಗಳಲ್ಲಿ ಸಾಧಿಸಲು ಸಾಧ್ಯವಾಗದ ಕನ್ನಡದ ಸೊಗಡನ್ನು, ನಿರ್ಮಾಣದ ಚಿತ್ರದ ಮೂಲಕ ಪವನ್ ಸಾಧಿಸಿದ್ದಾರೆ. ಈವರೆಗೆ ವ್ಯಾಪಾರಿ ಕಾರಣಗಳಿಗಾಗಿ ಅಭಿನಂದನೆಗಳಿಗೆ ಪಾತ್ರರಾಗುತ್ತಿದ್ದ ಅವರಿಗೆ, ಇದೇ ಮೊದಲ ಬಾರಿಗೆ ಅಪ್ಪಟ ಕನ್ನಡ ಚಿತ್ರವೊಂದರ ಕಾರಣಕ್ಕಾಗಿ ಅಭಿನಂದನೆ ಸಲ್ಲಬೇಕಾಗಿದೆ.



## ಸಿನಿಮಾ-ಸಂಸ್ಕೃತಿ ಪ್ರೇಮಿ

‘ರಾಜ್–ವಿಷ್ಣು’ ಸಿನಿಮಾ ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ತೆರೆ ಕಾಣಲು ಸಿದ್ಧತೆ ನಡೆಸುತ್ತಿದೆ. ಕೆ. ಮಾದೇಶ್ ನಿರ್ದೇಶನದ ಈ ಚಿತ್ರ ತಮಿಳಿನ ‘ರಜಿನಿ ಮುರುಗ’ ಚಿತ್ರದ ಕನ್ನಡ ರೂಪ. ರೀಮೇಕ್ ಚಿತ್ರಗಳ ಸ್ಪೆಷಲಿಸ್ಟ್ ಎಂದು ಹೆಸರಾದ ಕೆ. ಮಾದೇಶ್ ‘ರಾಜ್–ವಿಷ್ಣು’ ಚಿತ್ರದ ನಿರ್ದೇಶಕರು.

ಮುಂಬೈ ಚೆಲುವೆ ವೈಭವಿ ‘ರಾಜ್–ವಿಷ್ಣು’ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪರಿಚಯಗೊಳ್ಳುತ್ತಿದ್ದಾರೆ. ವೈಭವಿ ಅವರಿಗೆ ದಕ್ಷಿಣಭಾರತ ಚಿತ್ರರಂಗದಲ್ಲಿ ನೆಲೆ ಕಂಡುಕೊಳ್ಳುವ ಆಸೆ. ಅದಕ್ಕೆ ತಕ್ಕನಾಗಿ ಈಗಾಗಲೇ ತಮಿಳು ಚಿತ್ರಗಳಲ್ಲಿ ನಟಿಸಿರುವ ಅವರು, ‘ರಾಜ್–ವಿಷ್ಣು’ ಮೂಲಕ ಗಾಂಧಿನಗರಕ್ಕೆ ಬಂದಿದ್ದಾರೆ. ತೆಲುಗು ಚಿತ್ರವೊಂದರಲ್ಲಿ ಕೂಡ ಅವರು ನಟಿಸುತ್ತಿದ್ದಾರೆ. ಎರಡು ಮರಾಠಿ ಸಿನಿಮಾಗಳು ಹಾಗೂ ಅರೇಬಿಕ್ ಭಾಷೆಯ ಚಿತ್ರವೊಂದರಲ್ಲೂ ನಟಿಸಿದ್ದಾರೆ.

ವೈಭವಿ ಪಾಲಿಗೆ ಸಿನಿಮಾ ಎನ್ನುವುದು ನಟನೆಯ ಪುಳಕಕ್ಕಷ್ಟೇ ಸೀಮಿತವಾದುದಲ್ಲ. ವಿಭಿನ್ನ ಸಂವೇದನೆಗಳು ಹಾಗೂ ಸಂಸ್ಕೃತಿಗಳಿಗೆ ಒಡ್ಡಿಕೊಳ್ಳುವ ಮಾಧ್ಯಮವಾಗಿ ಅವರಿಗೆ ಸಿನಿಮಾ ಮುಖ್ಯವೆನ್ನಿಸಿದೆ. ರಂಗಭೂಮಿ ಹಿನ್ನೆಲೆ ಹೊಂದಿರುವ ಈ ಕಲಾವಿದೆ – ಭರತನಾಟ್ಯ ಹಾಗೂ ಕಥಕ್ ನೃತ್ಯಗಳನ್ನು ಬಲ್ಲವರು.

ಶರಣ್ ‘ರಾಜ್–ವಿಷ್ಣು’ ಚಿತ್ರದ ನಾಯಕ. ಚಿಕ್ಕಣ್ಣ ತಾರಾಗಣದಲ್ಲಿರುವ ಮತ್ತೊಬ್ಬ ಪ್ರಮುಖ ಕಲಾವಿದ. ಚಿತ್ರದ ನಾಯಕನ ತಂದೆ ವಿಷ್ಣುವರ್ಧನ್ ಅಭಿಮಾನಿಯಾಗಿದ್ದರೆ, ನಾಯಕಿಯ ತಂದೆ ರಾಜ್‌ಕುಮಾರ್ ಅಭಿಮಾನಿ. ಮಾನವೀಯ ಸಂಬಂಧಗಳ ಮಹತ್ವದ ಕುರಿತು ಮಾತನಾಡುವ ಈ ಸಿನಿಮಾ ರಾಜ್–ವಿಷ್ಣು ಅಭಿಮಾನಿಗಳಿಗೆ ವಿಶೇಷವಾದ ಕೊಡುಗೆಯಾಗಲಿದೆ ಎನ್ನುವುದು ಚಿತ್ರತಂಡದ ವಿಶ್ವಾಸ.